ಶ್ರೀ ಕಡಿದಾಳ್ ಮಂಜಪ್ಪ.—ಕೇಳುತ್ತಿದ್ದಾರೆ.

ಶ್ರೀ ಟಿ. ಹನುಮಯ್ಯ.—ಆ ಬಗ್ಗೆ ಜಿಲ್ಲಾಧಿಕಾರಿಗಳು ಶಿಫಾರಸ್ಸು ಮಾಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಟಿ. ಹನುಮಯ್ಯ.—ಯಾವಾಗ ರಿಲೀಸ್ ಮಾಡಿಕೊಡುತ್ತೀರಿ ?

ಅಧ್ಯಕ್ಷರು.—ಈಗ ರಿಲೀಸ್ ಮಾಡಿರುವುದನ್ನು ಕೊಟ್ಟರೇ ಸಾಕಾಗಿದೆ

ಶ್ರೀ ಟಿ. ಹನುಮಯ್ಯ.—ಈಗ ಈ ಈಚಲು ವನಗಳಲ್ಲಿ ಜಮೀನು ಕೊಡದೆ ನಿಂತಿರುವುದನ್ನು ಸರ್ಕಾರದವರು ಕೊಡಕೂಡದೆಂದು ಹೇಳಿರುವುದು ಸರ್ಕಾರದವರಿಗೆ ಗೊತ್ತಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗಿಲ್ಲ ; ರಿಲೀಸ್ ಆಗಿರುವ ಈಚಲು ವನಗಳನ್ನು ಕೊಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಈಚಿನ ಒಂದು ಸರ್ಕ್ಯುಲರ್ ಪ್ರಕಾರ ಹಾಗೆ ಕೊಡಕೂಡದೆಂದು ಹುಕುಂ ಮಾಡಿದ್ದರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಮಿಲಿಟರಿಯವರು ಕೆಲವರು ಅರ್ಜಿಗಳನ್ನು ಹಾಕಿಕೊಂಡಿದ್ದಾರೆ. ಅವರಿಗೆ ಕೊಡುವವರೆಗೂ, ಈ ಜಮೀನುಗಳನ್ನು ಬೇರೆಯವರಿಗೆ ವಿಲೇವಾಡಕೂಡದೆಂದು ಹೇಳಿರಬಹುದು.

Land given to scheduled Castes people under Grow More Food Scheme.

Q.—562. Sri J. NARAYANAPPA (Chintamani—Scheduled Castes).—

Will the Government be pleased to state :—

(*a*) the number of acres of land given to Scheduled Castes people under Grow More Food Scheme since 1942 in Kolar District ;

(*b*) out of the lands so given, the number of acres given permanently after five years ;

(*c*) the number of acres of land not given and the reasons for the same ;

(*d*) whether they are taking steps to verify if the Shanbhogues are properly writing pahani accounts of the lands given to Depressed Class people under Grow More Food Scheme ?

A.—Sri KADIDAL MANJAPPA (Minister for Revenue and Public Works).—

(*a*) 16,322 acres and 18 guntas.

(*b*) 4,146 acres and 14 guntas.

(*c*) 12,176 acres and 4 guntas. The reasons are (1) lease period is not yet over in some cases, (2) in some cases, failure on the part of the grantees in fulfilling the conditions of the grant has caused delay in confirmation of the lands and (3) in other cases, the records are under correspondence for confirmation.

(*d*) Yes.

ಶ್ರೀ ಜೆ. ನಾರಾಯಣಪ್ಪ.—ಹೀಗೆ ಸಾಗುವಳಿಗೆ ಕೊಟ್ಟಿರುವ ಜಮೀನುಗಳನ್ನು ಖಾಯಂ ಮಾಡಬೇಕಾದರೆ ಎಷ್ಟು ವರ್ಷಗಳು ಬೇಕು ?

ಅಧ್ಯಕ್ಷರು.—ಅವೆಲ್ಲಾ ರೂಲ್ಸ್‌ನಲ್ಲಿವೆ.

ಶ್ರೀ ಜೆ. ನಾರಾಯಣಪ್ಪ.—ಹಿಂದೆ 1942ರಲ್ಲಿ ಕೊಟ್ಟ ಜಮೀನುಗಳನ್ನು 1942ನೆಯ ಇಸವಿಯಿಂದ ಇಲ್ಲಿಯವರೆಗೂ ಎಲ್ಲ ರೈತರೂ ಸರಿಯಾಗಿ ಸಾಗುವಳಿ ಮಾಡುತ್ತಿದ್ದಾರಲ್ಲವೇ ?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲರೂ ಮಾಡುತ್ತಿದ್ದಾರೆಂದು ಹೇಳುವುದು ಕಷ್ಟ.

ಶ್ರೀ ಜೆ. ನಾರಾಯಣಪ್ಪ.—ಸರಿಯಾಗಿ ಸಾಗುವಳಿ ಮಾಡುತ್ತಿದ್ದರೂ, ಶ್ಯಾನುಭೋಗರುಗಳು ಸರಿಯಾಗಿ ತರಾವಾಗಿಸ್ಲಿ, ಬೇಳು ಬಿದ್ದಿದೆಯೆಂದು ಹೇಳಿ ರೈತರಿಗೆ ತೊಂದರೆ ಮಾಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ಹಾಗೆ ನಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿಲ್ಲ. ನಮ್ಮ ಗಮನಕ್ಕೆ ಬಂದರೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ನಿಮ್ಮ ತರಗತಿಯವರು ಕೆಲವರು ಮೂರು ನಾಲ್ಕು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ಸಾಗುವಳಿ ಮಾಡುತ್ತಿದ್ದರೂ ಅಂಥ ಜಮೀನುಗಳನ್ನೂ ಖಾಯಂ ಮಾಡಿಕೊಡುವುದಕ್ಕಾಗುವುದಿಲ್ಲವೆಂದು ಹೇಳಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವುದೋ ಒಂದು ನಿದರ್ಶನ ನನ್ನ ಗಮನಕ್ಕೆ ಬಂದಿದೆ.

Criminal Cases under the Sales-Tax Act.

Q.—635. Sri T. G. THIMMEGOWDA (Tiptur).—

Will the Government be pleased to state :—

the number of criminal cases launched under the Sales-tax Act up to the end of December 1952 and the number of cases which ended in conviction and the amount of tax collected through this ?